Farming Societies in Sindhnur Taluk

587. Sri M. NAGAPPA (Raichur) [On behalf of SRI G. AMARE GOWDA (Sindhnur)].—

Will the Minister for Development be pleased to state :—

(*a*) the number of Farming societies existing in Sindhnoor Taluk ;

(*b*) out of then the number of defunct Societies ?

Sri B. L. GOWDA (Deputy Minister for Co-operation)

(*a*) 18.

(*b*) 8.

ಶ್ರೀ ಎಂ. ನಾಗಪ್ಪ.—18 ಕೃಷಿ ಸಂಘಗಳಿಗೆ ಸರಕಾರಿ ಜಮೀನುಗಳು ಏನಾದರೂ ಕೊಟ್ಟಿದೆಯೇ ?

†ಶ್ರೀ ಬಿ. ಎಲ್. ಗೌಡ.—ಕೆಲವಕ್ಕೆ ಸರಕಾರದ ಜಮೀನು ಕೊಟ್ಟಿದೆ. ಕೆಲವರು ಜಮೀನನ್ನು ಕೊಂಡುಕೊಂಡಿದ್ದಾರೆ.

ಶ್ರೀ ಎಂ. ನಾಗಪ್ಪ.—ಎಂಟು ಸೊಸೈಟಿಗಳು ಡಿಫಂಕ್ಟ್ ಆಗಿವೆ ಎಂದು ಹೇಳಿದ್ದೀರಿ. ಸರಕಾರದ ಜಮೀನು ಕೊಟ್ಟಂಥ ಸೊಸೈಟಿಗಳು ಎಷ್ಟು ?

ಶ್ರೀ ಬಿ. ಎಲ್. ಗೌಡ.—ಕೆಂಗಲದಲ್ಲಿ ಒಂದು ಸೊಸೈಟಿ ಇದೆ. ಅದಕ್ಕೆ 110 ಎಕರೆ ಕೊಟ್ಟಿದೆ, ಕಾನೂರು ಸೊಸೈಟಿಗೆ 152 ಎಕರೆ ಕೊಟ್ಟಿದೆ, ರೂಡಕೊಂಡ ಸೊಸೈಟಿಗೆ 145 ಎಕರೆ ಕೊಟ್ಟಿದೆ, ಗೋರ್‌ಬಾಳ ಸೊಸೈಟಿಗೆ 342 ಎಕರೆ ಕೊಟ್ಟಿದೆ, ಗೂರ್‌ಬಾಳಕ್ಯಾಂಪ್ ಸೊಸೈಟಿಗೆ 225 ಎಕರೆ ಕೊಟ್ಟಿದೆ, ಬೂದಿವಾರ್ ಸೊಸೈಟಿಗೆ 243 ಎಕರೆ ಕೊಟ್ಟಿದೆ, ಉಪ್ಪಾಲ ಸೊಸೈಟಿಗೆ 265 ಎಕರೆ ಕೊಟ್ಟಿದೆ, ಮಾಧವನಗರ ಸೊಸೈಟಿಗೆ 147 ಎಕರೆ ಕೊಟ್ಟಿದೆ.

ಶ್ರೀ ಎಂ. ನಾಗಪ್ಪ.—ಇಂತಹ ಡಿಫಂಕ್ಟ್ ಸೊಸೈಟಿಗಳಿಗೆ ಸರಕಾರಿ ಜಮೀನು ಕೊಟ್ಟವ್ವೀರಿ. ಆ ಜಮೀನಿನ ವ್ಯವಸ್ಥೆ ಏನು ? ಅದೂ ಅಲ್ಲದೆ ಸರಕಾರದ ಜಮೀನುಗಳಮೇಲೆ ಕೊಟ್ಟಂಥ ಲೋನ್ ಎಷ್ಟು ಮತ್ತು ಗ್ಯಾಂಟ್ ಎಷ್ಟು ! ಲೋನ್ ಮತ್ತು ಗ್ಯಾಂಟಿನ ವ್ಯವಸ್ಥೆ ಯಾವ ದೃಷ್ಟಿಯಿಂದ ಮಾಡಿದ್ದೀರಿ !

ಶ್ರೀ ಬಿ. ಎಲ್. ಗೌಡ.—ನಾಮಾನ್ಯವಾಗಿ ರ್ಯಾಂಡ್‌ಲೆಸ್ ಲೇಬರ್ಸ್‌ನವ್ವಿ ರಿಹ್ಯಾಬಿಲಿಟೇಟ್ ಮಾಡುವುದಕ್ಕೋಸ್ಕರ ಯೊ ಚನೆ ಇದೆ. ತಿರುಗಿ ಸೊಸೈಟಿಗಳನ್ನು ಪುನರ್ರಚನೆ ಮಾಡುವುದಕ್ಕೆ ಪ್ರಯತ್ನ ನಡೆಯುತ್ತಾ ಇದೆ. 18 ಸೊಸೈಟಿಗಳಿಗೆ ಎಷ್ಟೆಷ್ಟು ಕೊಡಬೇಕು ಎನ್ನುವ ವಿವರಗಳು ಟೇಬರ್ ಮೇಲೆ ಇಡುತ್ತೇನೆ. ಅದು ಬಹಳ ದೊಡ್ಡ ಲಿಸ್ಟ್ ಆಗುತ್ತದೆ.

Coconut Pick-ups In Tiptur Taluk

600. Sri V. L. SHIVAPPA (Tiptur).—

Will the Minister of State for Minor Irrigation be pleased to state :—

the number of Coconut Pick-ups if any taken for or proposed for execution in Tiptur Taluk during 1968-69 and 1969-70 ?

Smt. BASAVARAJESWARI.—(Deputy Minister for Social Welfare [On behalf of Sri A. J. DODDAMETI (Minister of State for Minor Irrigation].—

No Coconut pick-ups have been taken up or are proposed to be taken up by the Public Works Department in Tiptur Taluk during 1968-69 and 1969-70.

ಶ್ರೀ ವಿ. ಎಲ್. ಶಿವಪ್ಪ.—ಸ್ಪ್ಯಾಮಿ ಇದೇ ಪ್ರಶ್ನೆ 24ನೇ ಜನವರಿ 1969ರಲ್ಲಿ ಇದೇ ಮನೆಯಲ್ಲಿ ಬಂದಿತ್ತು. ಸಾಯಿಲ್ ಕನ್‌ಸರವೇಷನ್ ಮುಖಾಂತರ ಹಣವನ್ನು ಒದಗಿಸಿದ್ದೇವೆ ಎಂದು ಆಗಿನ ಇರಿಗೇಷನ್ ಡೆಪ್ಯುಟಿ ಮಿನಿಸ್ಟರು ಹೇಳಿದ್ದರು. ನವಂಬರ ತಿಂಗಳಲ್ಲಿ ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್ ಮುಖಾಂತರ ಸಾಯಿಲ್ ಕನಸರ್‌ವೇಶನ್ ತೆಗೆದುಕೊಳ್ಳಬೇಕೆಂದು ಸರಕಾರದವರು ಆರ್ಡರ್‌ಮಾಡಿದ್ದಾರೆ. ಅದರ ಪ್ರಕಾರ ನಡೆಯುತ್ತಿದೆ ಎಂದು ಹೇಳಿದರು. ಈಗೊತ್ತು ಉತ್ತರ ಹೇಳಿದ್ದಾರೆ ಯಾವ ಒಂದು ಕೆಲಸ ಮಾಡಲಿಲ್ಲ. ಮೈನರ ಇರಿಗೇಷನ್ ಮುಖಾಂತರ ಕೆಲಸ ಮಾಡುವ ಉದ್ದೇಶ ಇಟ್ಟುಕೊಂಡಿಲ್ಲ ಎಂದು ಹೇಳಿದ್ದಾರೆ. ಅವರೂ ಮಾಡಲಿಲ್ಲ ನೀವೂ ಮಾಡುವದಿಲ್ಲ, ಹಿಂದೆ ಇರಿಗೇಷನ್ ಇಲಾಖೆಯ ಮುಖಾಂತರ ಕೆಲಸ ನಡೆಯುತ್ತಿತ್ತು. ಗುಲಬರ್ಗ, ರಾಯಚೂರು, ಬಿಜಾಪುರ ಬಿಟ್ಟರೆ ಬೇರೆ ಎಲ್ಲಿಯೂ ಕೆಲಸ ಮಾಡಕೂಡದೆಂದು ತಮ್ಮ ಅಭಿಪ್ರಾಯವೇ ?

†ಶ್ರೀಮತಿ ಬನವರಾಜೇಶ್ವರಿ.—ಒಟ್ಟಿಗೆ ಎರಡು ಮೂರು ಪ್ರಶ್ನೆ ಕೇಳಿದ್ದಾರೆ. ಮೊದಲನೆಯದು ಹಿಂದಿನ ಇರಿಗೇಷನ್ ಮಿನಿಸ್ಟರ್ ಕೆಲಸವಾಡಿದ್ದಾರೆ ಎಂದು ಹೇಳಿದರು. 1968 ರಿಂದ ಈಚೆಗೆ ಮೈಸೂರು ಇರಿಗೇಷನ್ ಡಿಪಾರ್ಟ್‌ಮೆಂಟನವರು ಕೆಲಸ ನಿಲ್ಲಿಸಿದ್ದಾರೆ. ಯಾಕೆಂದರೆ ಬೆಟರ್‌ಮೆಂಟ್ ಲೆವಿ ಇರಿಗೇಷನ್ ಆಕ್ಟ್ ಪ್ರಕಾರ ಅದು ಬರುವುದಿಲ್ಲ. ಎರಡನೆಯದು ಲ್ಯಾಂಡ್ ಇಂಪ್ರೂವ್‌ಮೆಂಟ್‌ಸ್ಕೀಂನಲ್ಲಿ ತೆಗೆದುಕೊಳ್ಳಬೇಕು ಎಂದು ರೆಫರ್‌ಮಾಡಿದ್ದೇವೆ. ಅಲ್ಲಿಯೂ ಈಗೊತ್ತಿನ ಕಾನೂನು ಪರಿಸ್ಥಿತಿಯಲ್ಲಿ ತೊಂದರೆ ಆಗುತ್ತಾ ಇರುವುದರಿಂದ ಮಾನ್ಯ ಸದಸ್ಯರೆಲ್ಲರನ್ನೂ ಕರೆಸಿಕೊಂಡು ಸಭೆ ಸೇರಿಸಿ ಅನೇಕ ವಿಷಯಗಳನ್ನು ಪ್ರಸ್ತಾಪಮಾಡಿದ್ದೇನೆ. ಹಾಗೆ ಪ್ರಸ್ತಾಪ ಮಾಡತಕ್ಕ ಸಂದರ್ಭದಲ್ಲಿ ಈ ಖರ್ಚು ಯಾರು ವಹಿಸಬೇಕು ಎನ್ನುವ ವಿಚಾರದಲ್ಲಿ ಮಾನ್ಯ ಸದಸ್ಯರು ಸರಕಾರ ಮಾಡಬೇಕೆಂದು ಹೇಳುತ್ತಿದ್ದಾರೆ. ಈಗೊತ್ತಿನ ಪರಿಸ್ಥಿತಿಯಲ್ಲಿ ಒಂದು ವೇಳೆ ಸರಕಾರ ಮಾಡಿದರೆ ಸರಕಾರಕ್ಕೆ ಅದ್ದರಿಂದ ಲಾಭ ಬರುವುದಿಲ್ಲ. ಹೀಗೆ ಲ್ಯಾಂಡ್ ಇಂಪ್ರೂವ್‌ಮೆಂಟ್ ಸ್ಕೀಂನಲ್ಲಿ ಮಾಡಬೇಕಾದರೂ ಕಾನೂನಿಲ್ಲ ಅರೀತಿ ಮಾಡುವುದಕ್ಕೆ ತೊಂದರೆ ಆಗುತ್ತದೆ. ಯಾಕೆಂದರೆ ಗೌವರ್ನಮೆಂಟ್ ಲೋನ್ ಸ್ಯಾಂಕ್ಷನ್‌ಮಾಡಿ ಹಾಕಬೇಕಾಗುತ್ತದೆ. ಇದನ್ನು ಸರಕಾರ ವಿಚಾರ ಮಾಡುತ್ತಿದೆ.

ಎರಡನೇ ವಿಷಯ ರಾಯಚೂರು, ಗುಲ್ಬರ್ಗ ಭಾಗದಲ್ಲಿ ಇದ್ದುದ್ದು ಮಾತ್ರ ಮಾಡಬೇಕು ಹಳೇ ಮೈಸೂರಿನಲ್ಲಿರತಕ್ಕ ಸ್ಕೀಂ ನಿಲ್ಲಿಸಬೇಕೆಂಬ ಅಭಿಪ್ರಾಯವೇ ಎಂದು ಕೇಳಿದರು, ಅದನ್ನು ನಾನು ಒಪ್ಪುವುದಿಲ್ಲ, ಆ ರೀತಿ ಸರ್ಕಾರದವರ ಭಾವನೆ ಇಲ್ಲ. ಇದನ್ನು ವಿಚಾರ ಮಾಡುತ್ತಾ ಇದ್ದೇವೆ.

9-30 A.M.

ಶ್ರೀ ವಿ.ಎಲ್. ಶಿವಪ್ಪ.—ಮಾಡಿಸುವುದಕ್ಕೆ ಪ್ರಯತ್ನಪಟ್ಟಿಲ್ಲ ಎಂದು ಹೇಳಿದರು. ಬಾಗಾಯ್ತು ಜಪಾನಿಗೆ ಒಂದು ಎಕರೆಗೆ 2-3 ರೂಪಾಯಿ ಕಂದಾಯ ಇದ್ದುದನ್ನು 25 ರೂಪಾಯಿಗೆ ಏರಿಸಿದ್ದಾರೆ. ಚಿಕ್ಕನಾಯಕನಹಳ್ಳಿ, ತಿಪಟೂರು, ತುರುವೇಕೆರೆ ಈ ಪ್ರದೇಶದಲ್ಲಿರತಕ್ಕ ತೆಂಗಿನ ತೋಟಗಳನ್ನು ಉಳಿಸುವುದು ಸರ್ಕಾರದವರ ಜವಾಬ್ದಾರಿ. ಕಳೆದ ಶಾಸನಸಭೆಯಲ್ಲೂ ಕೂಡ 6 ಜನ ಸದಸ್ಯರು ಮುಖ್ಯಮಂತ್ರಿಗಳಿಗೆ ಈ ವಿಚಾರದಲ್ಲಿ ಮನವಿ ಕೊಟ್ಟಿದ್ದರು. ಇನ್ನಾದರೂ ಈ ಕೆಲಸ ಮಾಡುತ್ತೀರಾ ಅಥವಾ ಈ ಕೆಲಸ ಆಗಬಾರದು ಎಂದು ನಿಮ್ಮ ಉದ್ದೇಶ ಇದ್ದು ಆ ರೀತಿ ತೀರ್ಮಾನ ಮಾಡಿದ್ದೀರಾ ಎಂದು ಕೇಳುತ್ತೇನೆ.

ಶ್ರೀಮತಿ ಬನವರಾಜೇಶ್ವರಿ.—ಇವತ್ತಿನ ದಿವಸ ಸರ್ಕಾರ ಕಾನೂನು ಪ್ರಕಾರ ಕೆಲಸ ಮಾಡಬೇಕಾಗುತ್ತದೆ. ಇರಿಗೇಷನ್ ಆಕ್ಟ್ ಪ್ರಕಾರ ಇದು ಬರುವುದಿಲ್ಲ. ಲ್ಯಾಂಡ್ ಇಂಪ್ರೂವ್‌ಮೆಂಟ್ ಸ್ಕೀಂನಲ್ಲಿ ಇದನ್ನು ತೆಗೆದುಕೊಳ್ಳಬೇಕಾದರೆ ತೊಂದರೆ ಇದೆ. ಅದ್ದರಿಂದ ಇದನ್ನು ಯೋಚನೆ ಮಾಡುತ್ತಾ ಇದ್ದೇವೆ, ವಿಚಾರ ಮಾಡಿ ಅಂತಿಮ ನಿರ್ಣಯ ತೆಗೆದುಕೊಂಡ ಮೇಲೆ ಇದರ ಬಗ್ಗೆ ಹೇಳಬೇಕಾಗುತ್ತದೆ.

ಶ್ರೀ ಎಸ್. ಶಿವಪ್ಪ.—ಕಂದಾಯ ಪುನರ್ವಿಮರ್ಶೆಯಾಗಿ, ತೆಂಗಿನ ತೋಟಗಳಿಗೆ ಕಂದಾಯ ಜಾಸ್ತಿ ಮಾಡಿ ಅದರಿಂದ ಹೆಚ್ಚು ಆದಾಯ ಪಡೆಯುತ್ತಾ ಇರುವಾಗ ಭೂಮಿ ಕೆತ್ತುಕೊಂಡು ಹೋಗ ತಕ್ಕ ಸ್ಥಳಗಳಿಗೆ ಸಿರ್ಫ್ ಡ್ಯಾಂ ಕಟ್ಟಿಕೊಡಬೇಕು, ಇದು ತಮ್ಮ ಕರ್ತವ್ಯವಲ್ಲವೇ ?

ಶ್ರೀಮತಿ ಬನವರಾಜೇಶ್ವರಿ.—ಈಗಾಗಲೇ ಉತ್ತರ ಹೇಳಿದ್ದೇನೆ. ಈ ಸ್ಮೀಂ ರ್ಯಾಂಡ್ ಇಂಪ್ರೂವ್‌ಮೆಂಟ್‌ನಲ್ಲಿ ತೆಗೆದುಕೊಂಡರೆ ಯಾರಿಂದ ಹಣ ರಿಕವರ್ ಮಾಡಬೇಕು, ಯಾರು ಮೇನ್ ಜೇನ್ ಮಾಡಬೇಕು ಎಂಬ ಈ ವಿಷಯಗಳೆಲ್ಲಾ ಅಡ್ಡಿ ಬರುತ್ತಾ ಇವೆ. ಇದನ್ನು ವಿಚಾರ ಮಾಡುತ್ತಾ ಇದ್ದೇನೆ ಎಂದು ಹೇಳಿದ್ದೇನೆ.

Sri S. SIVAPPA.—This is an important question.

Mr. SPEAKER.—If it is so, the hon. Member may give notice of half-an-hour discussion. I shall allow it.

Sri S. SIVAPPA.—Minor irrigation is under the overall charge of the Chief Minister. He can answer.

Mr. SPEAKER.—I have already suggested to the hon. Member to give notice of half an hour discussion. I shall allow it.

Demands of All India Handicrafts Board Employees

648. Sri M. S. KRISHNAN (Malleswaram).—

Will the Minister for Law, Labour and Parliamentary Affairs be pleased to state :—

(*a*) whether demands relating to leave facilities, confirmation of service, etc, were raised by the All India Handicrafts Board Employees' Association ; if so, when ;

(*b*) whether conciliation proceedings were conducted and if so, when ;

(*c*) whether the Labour Officer and Conciliation Officer has sent his reports to the Government ; and if so, on which date ;

(*d*) what action has been taken by Government in respect of these disputes ?

Sri K. PUTTASWAMY (Minister for Law, Labour and Parliamentary Affairs).—

(*a*) Yes ; on 27th November, 1967.

(*b*) Yes ; on 29th April 1968 ; and 2nd May, 1968.

(*c*) Yes ; on 21st June 1968.

(*d*) The dispute has been referred to the Additional Industrial Tribunal, Bangalore for adjudication on 30th January, 1970.

ಶ್ರೀ ಎಂ. ಎಸ್. ಕೃಷ್ಣನ್.—ಡಿಮ್ಯಾಂಡ್ ಕೊಟ್ಟ 5 ತಿಂಗಳು ಆದಮೇಲೆ ಕನ್‌ಸಿಲಿಯೇಷನ್ ಶುರುವಾಯಿತು ಎಂದು ಹೇಳಿದ್ದೀರಿ. ಇಷ್ಟು ಕಾಲ ವಿಳಂಬವಾಗುವುದಕ್ಕೆ ಕಾರಣವೇನು ? ಹಾಗೆಯೇ 1963ನೇ ಇಸವಿ 21ನೇ ಜೂನ್‌ನಲ್ಲಿ ಸರ್ಕಾರಕ್ಕೆ ರಿಪೋರ್ಟ್ ಬಂತು. 1970ನೇ ಇಸವಿ 30ನೇ ತಾರೀಖು ಜನವರಿಯಲ್ಲಿ ಕೋರ್ಟಿಗೆ ಹಾಕಿದ್ದೀರಿ, ಈ ರೀತಿ ಒಂದೂವರೆ ವರ್ಷಕಾಲ ವಿಳಂಬವಾಗುವುದಕ್ಕೆ ಕಾರಣವೇನು ?